


# ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

## ಭಾಗ ೨೪

ಮಠಾಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರೊಂದಿಗೆ ಎಲ್ಲರೂ ಮಿಸೆಸ್ ಸೇವಿಯರ್ ಅವರನ್ನು ಆದರದಿಂದ ಸ್ವಾಗತಿಸಿದರು. ವಿರಜಾನಂದರಿಗೂ ಅತಿಥಿಗೃಹದಲ್ಲೇ ಇಳಿದುಕೊಳ್ಳುವ ಏರ್ಪಾಡಾಗಿತ್ತು, ಮದರ್ ಸೇವಿಯರ್ ಅವರನ್ನು ನೋಡಿಕೊಳ್ಳಲೆಂದು. ಇವರನ್ನು ಭೇಟಿಯಾಗಲು ಸ್ವಾಮಿ ಶಾರದಾನಂದರು ಕೊಲ್ಕತ್ತದ ಉದ್ಬೋಧನದಿಂದ ಬಂದು ಹೋದರು. ವಿರಜಾನಂದರು ಪೂಜ್ಯ ಬ್ರಹ್ಮಾನಂದರಿಗೆಂದು ಶ್ಯಾಮಲಾತಾಲ್‌ನಿಂದ ಒಂದು ಕೃಷ್ಣಾಜಿನವನ್ನು ತಂದಿದ್ದರು. ಅದನ್ನು ಬ್ರಹ್ಮಾನಂದರು ಸಂತೋಷದಿಂದ ಸ್ವೀಕರಿಸಿದರು. ಒಂದು ದಿನ ಮಾಯಾವತಿಯ ಅದ್ವೈತ ಆಶ್ರಮದ ವಿಶ್ವಸ್ತರ ಸಭೆ ಜರುಗಿತು. ಅದರಲ್ಲಿ ಪಾಲ್ಗೊಂಡವರು ಶರತ್ ಮಹಾರಾಜರು, ಸ್ವಾಮಿ ಶುದ್ಧಾನಂದರು, ಮಿಸೆಸ್ ಸೇವಿಯರ್ ಹಾಗೂ ಸ್ವಾಮಿ ವಿರಜಾನಂದರು. ಶರತ್ ಮಹಾರಾಜರು ವಿರಜಾನಂದರಿಗೆ ಮಾಯಾವತಿಯ ಜವಾಬ್ದಾರಿಯನ್ನು ಮತ್ತೆ ವಹಿಸಿಕೊಳ್ಳುವಂತೆ ಕೇಳಿಕೊಂಡರು. ಆದರೆ ಅವರು ಅದಕ್ಕೆ ಸಮ್ಮತಿಸಲಿಲ್ಲ.

ಮದರ್ ಸೇವಿಯರ್ ಅವರಿಗೆ ಮಠದ ಸಂಧ್ಯಾರತಿಯನ್ನು ವೀಕ್ಷಿಸಿ ತುಂಬ ಸಂತೋಷವಾಯಿತು. ಒಂದು ದಿನ ವಿರಜಾನಂದರು ಮದರ್ ಅವರನ್ನು ಕರೆದೊಯ್ದು ದಕ್ಷಿಣೇಶ್ವರದ ಭವತಾರಿಣಿಯ ಆರತಿಯನ್ನು ಹಾಗೂ ಶ್ರೀಮಾತೆಯವರು ಕೊಲ್ಕತ್ತೆಗೆ ಬಂದಾಗ ಇಳಿದುಕೊಳ್ಳುತ್ತಿದ್ದ 'ಉದ್ಬೋಧನ್' ಮನೆಯನ್ನು ತೋರಿಸಿಕೊಂಡು ಬಂದರು. ಆಗ ಶ್ರೀಮಾತೆಯವರು ಜಯರಾಂಬಾಟಿಯಲ್ಲಿದ್ದರು. ದೇಶ್‌ಬಂಧು ಚಿತ್ತರಂಜನ್ ದಾಸ್ ಒಂದು ದಿನ ತಮ್ಮ ಪತ್ನಿ ಹಾಗೂ ಮಗಳೊಂದಿಗೆ ಮಿಸೆಸ್ ಸೇವಿಯರ್ ಅವರನ್ನು ಭೇಟಿಯಾಗಲು ಬಂದಿದ್ದರು.[೧] ಮದರ್ ಬೋಲ್‌ಪುರದ ಶಾಂತಿನಿಕೇತನವನ್ನು ನೋಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದರಿಂದ ವಿರಜಾನಂದರು ಒಂದು ದಿನ ಅವರನ್ನು ಕರೆದುಕೊಂಡು ಬೋಲ್‌ಪುರಕ್ಕೆ ಹೋದರು. ಅಲ್ಲಿಯ ದೀನಬಂಧು (ಆನ್‌ಡ್ರೂಸ್) ಮತ್ತು ಕವಿ ಗುರು ರವೀಂದ್ರನಾಥರು ಬಹಳ ಸೌಹಾರ್ದದಿಂದ ಇವರಿಬ್ಬರನ್ನೂ ಸ್ವಾಗತಿಸಿದರು; ಶಾಲೆ ಮುಂತಾದವುಗಳನ್ನು ಬಹಳ ಉತ್ಸುಕತೆಯಿಂದ ತೋರಿಸಿದರು. ವಿರಜಾನಂದರು ರವೀಂದ್ರರ ಸಂಜೆಯ ಉಪಾಸನೆಯಲ್ಲಿ ಉಪಸ್ಥಿತರಿದ್ದರು.

ಸ್ವಾಮೀಜಿಯವರ ತಮ್ಮನಾದ ಮಹೇಂದ್ರನಾಥ ದತ್ತರೊಂದಿಗೆ ವಿರಜಾನಂದರಿಗೆ ಬಹಳ ಆತ್ಮೀಯ ಸಂಬಂಧವಿತ್ತು. ಅವರನ್ನು ವಿರಜಾನಂದರು 'ಬಡೋ ಚಾಚಾಜೀ' (ಹಿರಿಯ ಚಿಕ್ಕಪ್ಪ) ಎಂದು ಕರೆಯುತ್ತಿದ್ದರು. ಅವರೂ ಸಹ ವಿರಜಾನಂದರನ್ನು ಬಹು ಆದರದಿಂದ 'ಕಾಲೀಕಿಷನ್' ಎಂದು ಕರೆಯುತ್ತಿದ್ದರು. ಏಪ್ರಿಲ್ ೧ರಂದು ಒಂದು ತಮಾಷೆಯ ಘಟನೆ ನಡೆಯಿತು. ಅಂದು ವಿರಜಾನಂದರ ಹೆಸರಿನಲ್ಲಿ ಒಂದು ಪಾರ್ಸೆಲ್ ಬಂದಿತ್ತು. ಏಪ್ರಿಲ್ ೧ All Fools Day ಆದ್ದರಿಂದ ವಿರಜಾನಂದರು ತಕ್ಷಣ ಎಚ್ಚೆತ್ತುಕೊಂಡರು; ಪಾರ್ಸೆಲ್ಲನ್ನು ರಾತ್ರಿ ೧೨ರ ನಂತರ ಮೆಲ್ಲಗೆ ಬಿಚ್ಚಿ ನೋಡಿದರು. ಅದರಲ್ಲಿದ್ದುದು ಕೆಲವು ಜಿರಳೆಗಳು! ಪಾರ್ಸೆಲ್ ಕಳುಹಿಸಿದವರು ಮಹೇಂದ್ರನಾಥರು. ಆದರೆ ಮಹೇಂದ್ರರಿಗೇ ಪರಾಜಯವೆನ್ನಿ. ಏಕೆಂದರೆ ರಾತ್ರಿ ೧೨ ಗಂಟೆಯ ನಂತರ ಏಪ್ರಿಲ್ ೧ ಎಲ್ಲಿಂದ?! ಈ ಘಟನೆಯಿಂದ ನಗೆಯ ಹೊನಲೇ ಹರಿಯಿತು.

ಮದರ್ ಸೇವಿಯರ್ ಇಂಗ್ಲೆಂಡಿಗೆ ಹೋಗುವ 'ಮಾಲ್ವ' ಎಂಬ ಹೆಸರಿನ ಜಹಜನ್ನು ಮುಂಬೈಯಲ್ಲಿ ಏರುವವರಿದ್ದರು. ಅಷ್ಟರಲ್ಲಿ ಮಿಸ್ ಮ್ಯಾಕ್ಲಿಯಾಡ್ ಲಕ್ನೌನಿಂದ ಮಠಕ್ಕೆ ಬಂದಿದ್ದರು. ಅವರು ಮದರ್ ಸೇವಿಯರನ್ನು ಬೀಳ್ಕೊಡಲು ಮುಂಬೈವರೆಗೆ ಹೋಗುವವರಿದ್ದರು. ಏಪ್ರಿಲ್ ೪ರಂದು ಇವರಿಬ್ಬರನ್ನೂ ಮುಂಬೈ ರೈಲಿನಲ್ಲಿ ಕೂರಿಸಿ ಬರಲು ವಿರಜಾನಂದರು ಹೌರಾ ಸ್ಟೇಷನ್ನಿಗೆ ಹೋಗಿದ್ದರು. ಅವರನ್ನು ಬೀಳ್ಕೊಂಡು ಭಾರವಾದ ಹೃದಯದಿಂದ ಮಠಕ್ಕೆ ಹಿಂತಿರುಗಿದರು. ಆ ವಿದೇಶೀ ವೃದ್ಧೆಯಿಂದ ಅದೆಂತಹ ನಿರ್ಮಲ ಪ್ರೀತಿಯನ್ನು ಪಡೆದಿದ್ದರೋ, ಅಂತೆಯೇ ಅವರ ಪಥದಲ್ಲಿ ಉಪಕಾರವನ್ನೂ ಪಡೆದಿದ್ದರು. ಅವರನ್ನು ನೋಡುವ ಅವಕಾಶ ಮತ್ತಿನ್ನು ಯಾವಾಗ ಸಿಗುವುದೋ ಯಾರಿಗೆ ಗೊತ್ತು?[೨]

---

೧ ಚಿತ್ತರಂಜನರು ಕೆಲವು ಕಾಲದ ಹಿಂದೆ ಮಾಯಾವತಿಗೆ ಹೋಗಿ ಸ್ವಲ್ಪ ದಿನ ಇದ್ದು ಬಂದಿದ್ದರು.

೨ ವಿರಜಾನಂದರು ಮತ್ತೆ ಅವರನ್ನು ಭೇಟಿಯಾಗಲೇ ಇಲ್ಲ. ಮದರ್ ಸೇವಿಯರ್ ಮತ್ತೆ ಭಾರತಕ್ಕೆ ಹಿಂತಿರುಗಲಿಲ್ಲ. ವಿರಜಾನಂದರು ಅವರೊಂದಿಗೆ ಪತ್ರ ಸಂಪರ್ಕ ಇಟ್ಟುಕೊಂಡಿದ್ದರು. ಬೇಸಿಗೆಯಲ್ಲಿ ಹಾಗೂ ಮಿಸೆಸ್ ಸೇವಿಯರ್ ಜನ್ಮದಿನಗಳಲ್ಲಿ ಅವರಿಗೆ ಏನಾದರೊಂದು ಉಡುಗೊರೆಯನ್ನು ತಪ್ಪದೆ ಕಳುಹಿಸುತ್ತಿದ್ದರು. ೧೯೩೦ರಲ್ಲಿ ತಮ್ಮ ೮೩ನೇ ವಯಸ್ಸಿನಲ್ಲಿ ಮಿಸೆಸ್‌ಸೇವಿಯರ್ ತಮ್ಮ ದೇಹವನ್ನು ತ್ಯಜಿಸಿದರು. ಮುಂದೊಮ್ಮೆ ಶ್ಯಾಮಲಾತಾಲ್‌ನಲ್ಲಿ ಅವರ ಜನ್ಮದಿನವನ್ನು ಆಚರಿಸುತ್ತಿದ್ದಾಗ ವಿರಜಾನಂದರು ತುಂಬ ಭಾವಪರವಶರಾಗಿ ಹೀಗೆ ಹೇಳಿದ್ದರು: ''ನನಗೆ ಮೂರು ತಾಯಂದಿರಿದ್ದರು. ಮೊದಲನೆಯದಾಗಿ ಹೆತ್ತ ತಾಯಿ, ನಂತರ ಶ್ರೀಮಾತೆಯವರು, ತದನಂತರ


ಈ ಬಾರಿ ಕೊಲ್ಕತ್ತೆಯಿಂದ ಶ್ಯಾಮಲಾತಾಲ್‌ಗೆ ಹಿಂತಿರುಗುವ ಮೊದಲು ವಿರಜಾನಂದರು ಕೆಲವು ವಿಶಿಷ್ಟರಾದ ಹಳೆಯ ಗೆಳೆಯರನ್ನು ಭೇಟಿಯಾದರು. ಅವರಲ್ಲಿಬ್ಬರು ಡಾ. ಕಾರ್ತಿಕ ಚಂದ್ರ ಬಸು. ಅವರ ಲ್ಯಾಬೊರೇಟರಿ ಹಾಗೂ ಔಷಧಿ ಕಾರ್ಖಾನೆಯನ್ನು ನೋಡಿ ವಿರಜಾನಂದರು ತುಂಬ ಸಂತೋಷಪಟ್ಟರು. ಮತ್ತೊಬ್ಬ ಸ್ನೇಹಿತರು ಅವರ ಗುರುಭಾಯಿಯೂ ಆದ ಯದುಪತಿ ಚಟ್ಟೋಪಾಧ್ಯಾಯರು. ತಮ್ಮ ವ್ಯಾಪಾರ-ವಹಿವಾಟಿನಿಂದಾಗಿ ಅವರು ಬಹಳಷ್ಟು ಹಣವನ್ನು ಸಂಪಾದಿಸಿದ್ದರು. ಶ್ಯಾಮಲಾತಾಲಿನಲ್ಲಿ ಬಡ ಪಹಾಡಿಗಳಿಗೋಸ್ಕರ ಒಂದು ಚಿಕ್ಕ ಡಿಸ್ಪೆನ್ಸರಿ ತೆರೆಯುವವರಿದ್ದಾರೆಂಬ ಸುದ್ದಿಯನ್ನು ಕೇಳಿ, ಅದಕ್ಕಾಗಿ ತಾವು ಧನಸಹಾಯ ಮಾಡುವುದಾಗಿ ಅವರು ಮಾತುಕೊಟ್ಟರು.

ಇತ್ತ ಶ್ಯಾಮಲಾತಾಲ್‌ನಲ್ಲಿ , ವಿರಜಾನಂದರು ಹಿಂತಿರುಗಿದ ಒಂದು ವಾರದ ನಂತರ ಅಲ್ಲೇ ಇದ್ದ ರಾಘವಾನಂದರು (ಸೀತಾಪತಿ ಮಹಾರಾಜ್) ಕೇದಾರ-ಬದರಿಗೆ ಹೊರಟರು. 'ಮಾಲ್ವಾ' ಜಹಜು ನಿರ್ವಿಘ್ನವಾಗಿ ಇಂಗ್ಲೆಂಡ್ ತಲುಪಿದ ಸುದ್ದಿಯನ್ನು ಒಂದು ದಿನ ವೃತ್ತಪತ್ರಿಕೆಯಲ್ಲಿ ಓದಿದ ವಿರಜಾನಂದರಿಗೆ ನೆಮ್ಮದಿಯಾಯಿತು. ಒಂದು ತಿಂಗಳ ನಂತರ ಮಿಸೆಸ್ ಸೇವಿಯರ್‌ನಿಂದ ಪತ್ರವೂ ಬಂದಿತು. ಈಗ ಸ್ವಾಮೀಜಿಯವರ ಜೀವನ ಚರಿತ್ರೆಯ ನಾಲ್ಕನೇ ಭಾಗದ ಕೆಲಸವು ತೀವ್ರಗತಿಯಿಂದ ನಡೆಯತೊಡಗಿತು. ವಿರಜಾನಂದರ ದಿನಚರಿಯಿಂದ ತಿಳಿದುಬಂದಿರುವುದೇನೆಂದರೆ ಅವರು ದಿನವೂ ಬೆಳಗ್ಗೆ ಮೂರು ಗಂಟೆಗಳ ಕಾಲ ಹಾಗೂ ಸಂಜೆ ಎರಡು ಗಂಟೆಗಳ ಕಾಲ, ಒಟ್ಟು ಐದು ಗಂಟೆಗಳನ್ನು ಈ ಪುಸ್ತಕದ ಬರಹಕ್ಕಾಗಿ ವಿನಿಯೋಗಿಸುತ್ತಿದ್ದರು. ಎರಡು ಗಂಟೆಗಳಷ್ಟು ಕಾಲ ತೋಟದ ಕೆಲಸವನ್ನು ಮಾಡುತ್ತಿದ್ದರು.

ಶಿವಪುರದ ನರೇನ್ ಎಂಬ ಯುವಕನೊಬ್ಬ ೧೯೧೭ರ ಪೂರ್ವಾರ್ಧದಲ್ಲಿ ಶ್ಯಾಮಲಾತಾಲ್ ಆಶ್ರಮಕ್ಕೆ ಸೇರಿ, ಆಶ್ರಮದ ಕೆಲಸಕಾರ್ಯಗಳಲ್ಲಿ ವಿರಜಾನಂದರಿಗೆ ಬಹಳ ಸಹಾಯ ಮಾಡುತ್ತಿದ್ದ. ನಂತರದಲ್ಲಿ ಶ್ರೀಮಾತೆಯವರ ಕೃಪೆಗೆ ಪಾತ್ರರಾಗಿ ಮಂತ್ರದೀಕ್ಷೆಯನ್ನು ಪಡೆದ. ಸಂನ್ಯಾಸದ ನಂತರ ಇವರಿಗೆ 'ಮಹಾನಂದ' ಎಂದು ಹೆಸರಾಯಿತು. ೧೯೩೧ರಲ್ಲಿ ಶ್ಯಾಮಲಾತಾಲ್‌ನಲ್ಲಿಯೇ ಇವರ ದೇಹತ್ಯಾಗವಾಯಿತು. ಇವರು ಶ್ಯಾಮಲಾತಾಲ್‌ನಲ್ಲಿ ೧೪ ವರ್ಷಗಳ ದೀರ್ಘಕಾಲ ದಣಿವರಿಯದ ಸೇವೆಯನ್ನು ಸಲ್ಲಿಸಿದ್ದರು. ವಿರಜಾನಂದರು ಇವರ ಕಾರ್ಯದಕ್ಷತೆಯನ್ನು ಬಹಳವಾಗಿ ಪ್ರಶಂಸಿಸುತ್ತಿದ್ದರು.

ಮಾಯಾವತಿಗೆ ಹೋಗಿ ಬರುವಾಗಲೆಲ್ಲ ಸಾಧು-ಬ್ರಹ್ಮಚಾರಿಗಳು ಕೆಲದಿನಗಳ ಮಟ್ಟಿಗೆ ಶ್ಯಾಮಲಾತಾಲ್‌ನಲ್ಲಿ ತಂಗಿ ವಿಶ್ರಮಿಸುತ್ತಿದ್ದರು. ವಿರಜಾನಂದರ ಆತಿಥ್ಯವು ಎಲ್ಲರ ಮೆಚ್ಚುಗೆಯನ್ನು ಗಳಿ

ಮದರ್ ಸೇವಿಯರ್. ಮೂವರೂ ಹೊರಟುಹೋದರು. ಈಗ ನೋಡಿದರೆ ಲೆಕ್ಕವಿಲ್ಲದಷ್ಟು ತಾಯಂದಿರು.'' (ಅವರಿಂದ ದೀಕ್ಷೆ ಪಡೆದ ಪುತ್ರಿಸದೃಶರಾದ ಶಿಷ್ಯೆಯರನ್ನು ಕುರಿತು)


ಸ್ವಾಮಿ ಅಖಂಡಾನಂದರೊಂದಿಗೆ ವಿರಜಾನಂದರು

ಸಿತ್ತು. ಅವರು ತಾವೇ ಸ್ವತಃ ವಿವಿಧ ಭಕ್ಷ್ಯಗಳನ್ನು ಮಾಡಿ ಎಲ್ಲರಿಗೂ ಬಡಿಸುತ್ತಿದ್ದರು. ಶ್ಯಾಮಲಾತಾಲಿನ ಅಚ್ಚುಕಟ್ಟಾದ ನಿರ್ಜನ ಆಶ್ರಮವು ಎಲ್ಲರಿಗೂ ಒಂದು 'ಶಾಂತಿನಿಲಯ'ವಾಗಿತ್ತು. ಸ್ವಾಮಿ ವಿಶುದ್ಧಾನಂದರು (ಮುಂದೆ ಸಂಘದ ೮ನೇ ಮಠಾಧ್ಯಕ್ಷರು) ೧೯೧೭ರ ಮೇಯಲ್ಲಿ ಮಾಯಾವತಿಗೆ ಹೋಗುವಾಗ ಶ್ಯಾಮಲಾತಾಲ್ ಆಶ್ರಮವನ್ನು ಕಂಡು ಆನಂದಪರವಶರಾದರು. ಕೆಲವೊಮ್ಮೆ ಹೊರಗಿನ ಸಂನ್ಯಾಸಿಗಳೂ ಸಹ ಅಲ್ಲಿಗೆ ಬಂದುಬಿಡುತ್ತಿದ್ದರು. ವಿರಜಾನಂದರು ಅವರನ್ನೂ ಯಥೋಚಿತವಾಗಿ ಸತ್ಕರಿಸುತ್ತಿದ್ದರು. ಜುಲೈ ನಾಲ್ಕು ಸ್ವಾಮೀಜಿಯವರ ಮಹಾಸಮಾಧಿಯ ದಿನ; ಅಂದು ಅಲ್ಲಿ ಒಂದು ಚಿಕ್ಕ ಉತ್ಸವವನ್ನು ಏರ್ಪಡಿಸಿದ್ದರು. ಜುಲೈ ಎಂಟು ಸ್ವಾಮಿ ಸ್ವರೂಪಾನಂದರ ಜನ್ಮದಿನ. ಅಂದೂ ಸಹ ಸಣ್ಣ ಉತ್ಸವ ನಡೆಯಿತು. ಮುಂದೆಯೂ ಸಹ ವಿರಜಾನಂದರು ಈ ಎರಡು ದಿನಗಳಲ್ಲಿ ಉತ್ಸವವನ್ನು ತಪ್ಪದೆ ಆಚರಿಸುತ್ತಿದ್ದರು.

ಯೂರೋಪಿನಲ್ಲಿ ಮೊದಲನೆ ಮಹಾಯುದ್ಧ ನಡೆಯುತ್ತಿತ್ತು. ಮಿಸೆಸ್ ಸೇವಿಯರ್ ವಿದೇಶದ ನಾನಾ ಪತ್ರಿಕೆಗಳನ್ನು ಕಾಳೀಕೃಷ್ಣರಿಗೆ ಕಳುಹಿಸುತ್ತಿದ್ದರು. ಅದನ್ನೆಲ್ಲ ಅವರು ತುಂಬ ಉತ್ಸುಕತೆಯಿಂದ ಓದುತ್ತಿದ್ದರು. ಮದರ್ ಸೇವಿಯರ್ ಅವರ ಪತ್ರದಿಂದಲೂ ಯುದ್ಧದ ಬಗ್ಗೆ ಅನೇಕ ವಿಷಯಗಳನ್ನು ತಿಳಿಯುತ್ತಿದ್ದರು. ೧೯೧೭ರ ಕೊನೆಗೆ ಒಮ್ಮೆ ವಿರಜಾನಂದರು ಮಾಯಾವತಿಗೆ ಹೋಗಿ ಸುತ್ತಾಡಿ ಬಂದರು. ಮದರ್ ಸೇವಿಯರ್ ಅವರ ನೆನಪು ಬಹಳವಾಗಿ ಮನಸ್ಸಿಗೆ ಬರುತ್ತಿತ್ತು. ೩೦ ಮೈಲಿಯ ಈ ದೂರವನ್ನು ಅವರು ನಡೆದುಕೊಂಡೇ ಬಂದಿದ್ದರು.

೧೯೧೯ನೇ ವರ್ಷ ನಡೆಯುತ್ತಿತ್ತು. ಸ್ವಾಮೀಜಿಯವರ ಜೀವನ ಚರಿತ್ರೆಯ ನಾಲ್ಕನೇ ಭಾಗವು ಇನ್ನೂ ಮುಗಿದಿರಲಿಲ್ಲ. ಆ ವರ್ಷದೊಳಗೇ ಈ ಕೆಲಸವನ್ನು ಮುಗಿಸಬೇಕೆಂದು ವಿರಜಾನಂದರು ದೃಢಸಂಕಲ್ಪ ಮಾಡಿದರು. ಏನು ವಿಚಿತ್ರ! ಮಾಯಾವತಿಯಿಂದ ತಮ್ಮನ್ನು ತಾವು ಬಿಡಿಸಿಕೊಂಡು ಬಂದು ನಾಲ್ಕು ವರ್ಷಗಳು ಉರುಳಿದ್ದರೂ ಸಹ ಇನ್ನೂ ಪೂರ್ತಿಯಾಗಿ ರಜೆ ಸಿಕ್ಕಿರಲಿಲ್ಲ.

ಸ್ವಾಮಿ ಪ್ರಜ್ಞಾನಂದರು ಹೃದ್ರೋಗದಿಂದ ಪೀಡಿತರಾಗಿ ಕೊಲ್ಕತ್ತೆಗೆ ಹೋಗಿದ್ದರು. ಅಲ್ಲಿ 'ಉದ್ಬೋಧನ' ಕಟ್ಟಡದಲ್ಲಿ ಇರುತ್ತಿದ್ದರು. ಚಿಕಿತ್ಸೆ ನಡೆಯುತ್ತಿದ್ದರೂ ಸಹ ಕಾಯಿಲೆ ಉಲ್ಬಣಗೊಳ್ಳುತ್ತಲೇ ಇತ್ತು. ೧೯೧೮ರ ಏಪ್ರಿಲ್ ೧೯ರಂದು ಅವರು ತಮ್ಮ

ಶರೀರವನ್ನು ತ್ಯಜಿಸಿದರು. ಇದನ್ನು ಕೇಳಿದ ವಿರಜಾನಂದರು ಮಮಾಘಾತ ಹೊಂದಿದರು. ಪ್ರಜ್ಞಾನಂದರಂತಹ ಬಹು ಗುಣ ಸಂಪನ್ನ, ಜ್ಞಾನಿ, ತ್ಯಾಗಿ ಹಾಗೂ ಪ್ರೇಮಮಯಿ ಸಂನ್ಯಾಸಿಯ ಮೃತ್ಯುವು ಸಂಘಕ್ಕೆ ತುಂಬಲಾಗದ ನಷ್ಟವೇ ಸರಿ. ಇದರಲ್ಲಿ ಸಂದೇಹವಿಲ್ಲ. ಪ್ರಜ್ಞಾನಂದರು ಬರೆದ 'ಭಾರತದ ಸಾಧನೆ' ಎಂಬ ಪುಸ್ತಕದ ಭೂಮಿಕೆಯಲ್ಲಿ ಸ್ವಾಮಿ ಶಾರದಾನಂದರು, ಹೀಗೆ ಬರೆದಿದ್ದಾರೆ:

''ತಮ್ಮ ಕಿಶೋರಾವಸ್ಥೆಯಲ್ಲಿ ಸಂಯಮಶೀಲ ಹಾಗೂ ಸತ್ಯ – ಸಾಧಕ ಎಂದೂ, ಹದಿಹರೆಯದಲ್ಲಿ ನಿಃಸ್ವಾರ್ಥ ಸೇವಾವ್ರತ ಧಾರಿ ಹಾಗೂ ದಣಿವರಿಯದ ದೇಶಸೇವಕ ಎಂದೂ, ತುಂಬು ಯೌವನದಲ್ಲಿ ಪರಮಾರ್ಥ ಪ್ರೇಮಿ, ಸರ್ವಸಂಗ ಪರಿತ್ಯಾಗಿ ಸಂನ್ಯಾಸಿ ಎಂದೂ ಅವರ ಪರಿಚಯ ನಮ್ಮೆಲ್ಲರ ಚಿತ್ತವನ್ನು ಆಕರ್ಷಿಸಿತ್ತು. ಅಂತಹ ಅವರ ಮಧುಮಯ ವ್ಯಕ್ತಿತ್ವವು ಎಂತಹ ಅತ್ಯುನ್ನತ ಮಟ್ಟವನ್ನು ಮುಟ್ಟುವುದೋ ಎಂಬುದನ್ನು ಈಕ್ಷಿಸಲು ಕಾತರರಾಗಿದ್ದ, ಅವರ ಮಾರ್ಗದರ್ಶನದಲ್ಲಿ ನಡೆದು ಪರಮ ಸತ್ಯವನ್ನು ಪಡೆಯಲು ಉತ್ಸುಕರಾಗಿದ್ದ ಸಾಧಕರಿಗೆಲ್ಲ ಸತ್ಯಪಥದ ದಾರಿಯನ್ನು ಇಂಗಿತ ಮಾತ್ರದಿಂದ ತೋರಿ, ಶ್ರೀರಾಮಕೃಷ್ಣರಲ್ಲಿ ಹಾಗೂ ತಮ್ಮ ತಮ್ಮ ಆತ್ಮದಲ್ಲಿ ದೃಢವಾದ ಶ್ರದ್ಧೆಯನ್ನಿಟ್ಟು ನಿಲ್ಲ ಬೇಕೆಂದು ಹೇಳಿ, ದೇವವ್ರತ ಪ್ರಜ್ಞಾನಂದರು ನಶ್ವರ ಸಂಸಾರವನ್ನು ತ್ಯಜಿಸಿದ್ದಾರೆ.''

ಕೆಲವು ದಿನಗಳ ನಂತರ ವಿರಜಾನಂದರಿಗೆ ಸ್ವಾಮಿ ಶಾರದಾ ನಂದರಿಂದ ಒಂದು ಪತ್ರ ಬಂತು. ಅದರಲ್ಲಿ 'ವಿರಜಾನಂದರೇ ಪುನಃ ಮಾಯಾವತಿ ಆಶ್ರಮದ ಜವಾಬ್ದಾರಿಯನ್ನು ವಹಿಸಿಕೊಳ್ಳ ಬೇಕೆಂಬುದು ಸ್ವಾಮಿ ಬ್ರಹ್ಮಾನಂದರ ಇಚ್ಛೆ' ಎಂದು ತಿಳಿಸಿದ್ದರು. ವಿರಜಾನಂದರು ಕೆಲವು ವೈಯಕ್ತಿಕ ಕಾರಣಗಳನ್ನು ನೀಡಿ, ಹಿರಿ ಯರ ಆದೇಶದಿಂದ ವಿನಾಯತಿಯನ್ನು ಯಾಚಿಸಿದರು. ಶಾರದಾ ನಂದ ಮಹಾರಾಜರೂ ಸಹ ಇವರನ್ನು ಹೆಚ್ಚು ಬಲವಂತಪಡಿಸ ಲಿಲ್ಲ. ಸ್ವಾಮಿ ಮಾಧವಾನಂದರು ಮಾಯಾವತಿ ಅದ್ವೈತ ಆಶ್ರ ಮದ ಹೊಸ ಅಧ್ಯಕ್ಷರಾಗಿಯೂ, ಸ್ವಾಮಿ ರಾಘವಾನಂದರು 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾಗಿಯೂ ನೇಮಿಸ ಲ್ಪಟ್ಟರು.

ಸ್ವಾಮಿ ಪ್ರಜ್ಞಾನಂದರ ದೇಹತ್ಯಾಗವಾದ ಸರಿಯಾಗಿ ಮೂರು ತಿಂಗಳ ನಂತರ, ಜುಲೈ ೧೯ರಂದು (೧೯೧೮) ಅವರ ಪರಮ ಸ್ನೇಹಿತರೂ, ಸ್ವದೇಶಿ ಚಳುವಳಿಯ ಸಹಭಾಗಿಯೂ, ಪರಮ ಅನುಯಾಯಿಯೂ, ಸಹೋದರ ಸಮಾನರೂ ಆದ ಶಚೀನ್ (ಸ್ವಾಮಿ ಚಿನ್ಮಯಾನಂದ) ಕೊಲ್ಕತ್ತೆಯಲ್ಲಿ ತಮ್ಮ ದೇಹತ್ಯಾಗ ಮಾಡಿದರು, ಅದೇ ಉದ್ಬೋಧನದಲ್ಲಿ. ಇದಾದ ೧೧ ದಿನಗಳ ನಂತರ, ೧೯೧೮ರ ಜುಲೈ ೩೦ರಂದು ಬಾಬೂರಾಮ್ ಮಹಾ ರಾಜರು (ಸ್ವಾಮಿ ಪ್ರೇಮಾನಂದರು) ಬಲರಾಮ ಮಂದಿರದಲ್ಲಿ ಮಹಾಸಮಾಧಿ ಹೊಂದಿದರು. ಕ್ರಮವಾಗಿ ಬಂದ ಈ ದುಃಖ ವಾರ್ತೆಗಳನ್ನು ಕೇಳಿ ವಿರಜಾನಂದರು ವಿಷಣ್ಣರಾದರು. ನಾಲ್ಕು ತಿಂಗಳೊಳಗೆ ಇಬ್ಬರು ಮಹಾನ್ ಸಂನ್ಯಾಸಿಗಳು, ಮತ್ತು ಶ್ರೀರಾಮ ಕೃಷ್ಣರ ಅಂತರಂಗ ಪಾರ್ಷದರಲ್ಲೊಬ್ಬರು ಧರೆಯಿಂದ ಕಣ್ಮರೆ ಯಾಗಿದ್ದರು! ಬಾಬುರಾಮ್ ಮಹಾರಾಜರ ಗಾಢಸ್ನೇಹದ ನೆನಪು ವಿರಜಾನಂದರಿಗೆ ಮರುಕಳಿಸುತ್ತಲೇ ಇತ್ತು. ೨೩ ವರ್ಷ ಗಳ ಹಿಂದೆ ಬೃಂದಾವನದಲ್ಲಿ ಅವರ ಪುಣ್ಯ ಸಂಸರ್ಗದಲ್ಲಿ ಕಳೆದ ಆ ಸಾಧನೆಯ ದಿನಗಳು ಅದೆಂತಹ ಆನಂದದಾಯಕವಾದ ದಿನ ಗಳು! ಮಾಯಾವತಿಯ ಅಧ್ಯಕ್ಷ ಸ್ಥಾನದಿಂದ ನಿವೃತ್ತಿ ಪಡೆದ ನಂತರ ಬಾಬುರಾಮ್ ಮಹಾರಾಜರಿಂದ ಅವರ ಸ್ನೇಹ ಹಾಗೂ ಉಪದೇಶಗಳನ್ನು ಹೊತ್ತ ದೀರ್ಘ ಪತ್ರವೊಂದು ವಿರಜಾನಂದರಿಗೆ ಬಂದಿತ್ತು. ಅದರಲ್ಲಿ ಅವರು ಹೀಗೆ ಬರೆದಿದ್ದರು:

೨೩.೬.೧೯೧೪

ಬೇಲೂರು ಮಠ

ಪರಮ ಪ್ರೀತಿಪಾತ್ರ ಕಾಳೀಕೃಷ್ಣ,

ನಿನಗೆ ಪತ್ರವನ್ನು ಬರೆದು ಬಹಳ ಕಾಲವಾಯಿತು. ಅಂದು —ನಿಂದ ನಿನ್ನ ಕ್ಷೇಮ ಸಮಾಚಾರ ತಿಳಿದು ಸಂತೋಷವಾಯಿತು. ನಾವು ಹಿಂದೊಮ್ಮೆ ಐಶ್ವರ್ಯರಹಿತ ಶ್ರೀಕೃಷ್ಣನ ಮಧುರ ಲೀಲಾ ಭೂಮಿಯಾದ ವ್ರಜಧಾಮದಲ್ಲಿ ಅಪೂರ್ವ ಆನಂದದಿಂದ ದಿನ ಗಳನ್ನು ಕಳೆದದ್ದು ನೆನಪಿದೆಯೇನು? ಐಶ್ವರ್ಯರಾಹಿತ್ಯವೇ ಪೂರ್ಣಸುಖ, ಶಾಂತಿ ಹಾಗೂ ಆನಂದ. ನಮ್ಮ ಪ್ರಭು ಶ್ರೀರಾಮ ಕೃಷ್ಣರು ಮೊದಲಿಂದ ಕೊನೆಯವರೆಗೆ ಪೂರ್ತಿ ಅನೈಶ್ವರ್ಯ ಭಾವದಲ್ಲೇ ಲೀಲೆಯಾಡಿ ಹೋಗಿದ್ದಾರೆ. 'ಷಡೈಶ್ವರ್ಯವನ್ನು ತ್ಯಜಿಸಿ ಇದೆಂತಹ ಭಾವ ನಿನ್ನದು ಕೃಷ್ಣಯ್ಯ!' ಪೂರ್ಣ ಮತ್ತು ಇನ್ನಿತರ ತರುಣ ಭಕ್ತರನ್ನು ನೋಡಲೆಂದು ಬಾಗ್‌ಬಜಾರಿನ ಗಲ್ಲಿ ಗಲ್ಲಿಗಳಲ್ಲಿ ಅವರು ತಿರುಗಾಡುತ್ತಿದ್ದರು. ಆ ರೀತಿಯ ನಿರಾಡಂಬ ರತೆಯನ್ನು ಜಗತ್ತು ಇನ್ನು ಕಾಣುವುದೆ? ನಾವೆಲ್ಲರೂ ಅವರಲ್ಲಿಗೆ ಹೋದಾಗ ಗುರುದೇವರು ಹೀಗೆಂದಿದ್ದರು: ''ಅಯ್ಯೋ! ನನಗಿ ದೇನಾಯಿತು ಹೇಳು ನೋಡೋಣ! ನಿಮ್ಮನ್ನು ನೋಡದೆ ಇರ ಲಾಗುತ್ತಿಲ್ಲ. ನಿಮಗಾದರೋ ನನ್ನನ್ನು ಕುಳ್ಳಿರಿಸಲು ಒಂದು ಹರಿದ ಚಾಪೆಯಾದರೂ ಇಲ್ಲ. ನೀರಿನೊಂದಿಗೆ ಒಂದು ಪೈಸೆಯ ಬತ್ತಾಸ ನ್ನಾದರೂ ಕೊಡುವ ಶಕ್ತಿಯಿಲ್ಲ. ಆದರೂ ನಿಮ್ಮನ್ನು ಕಾಣದೆ ಇರಲಾಗುತ್ತಿಲ್ಲ. ಇದೇನು ವಿಚಿತ್ರ ಹೇಳು ನೋಡೋಣ! ಅಲ್ಲದೆ ನೀವು ನನ್ನನ್ನು ಗೌರವಿಸಿದರೆ ಹತ್ತು ಜನರು ಗೌರವಿಸುತ್ತಾರೆ ಎನ್ನುವಂತಹ ದೊಡ್ಡ ಮನುಷ್ಯರ ಮಕ್ಕಳೂ ನೀವಲ್ಲ. ಆದರೂ ನಿಮ್ಮನ್ನು ನೋಡದಿದ್ದರೆ ಮನಸ್ಸು ತಡೆಯುವುದಿಲ್ಲ. ಇದೆಂತಹ ಭಾವ ನನ್ನದು?'' ಶ್ರೀರಾಮಕೃಷ್ಣರ ಲೀಲೆಯು ಮೊದಲಿನಿಂದ ಕೊನೆಯವರೆಗೂ ಮಧುರವೇ ಮಧುರ! ಒಮ್ಮೆಯೂ ಪವಾಡ ವನ್ನು ತೋರಲಿಲ್ಲ , ಷಡ್ಭುಜವನ್ನೂ ತೋರಲಿಲ್ಲ! ಸದ್ಯ! ಮಹಾ ವಿದ್ವಾಂಸರಾಗಿ ಬರಲಿಲ್ಲ. ಹಾಗಿದ್ದರೆ ನಮಗೆಲ್ಲಿ ಸ್ಥಾನವಿರುತ್ತಿತ್ತು? ಕೇವಲ ಕೃಪೆ, ಕೃಪೆ. ಅಹೇತುಕ ಕೃಪೆ. ಪ್ರಪಂಚದಲ್ಲಿ ಇಂತಹುದು ಇನ್ನೊಂದು ನಡೆದಿದೆಯೇನು?

‘‘ಸ್ವಾಮೀಜಿಯವರು ಪ್ರಚಾರ ಕಾರ್ಯಕ್ಕಾಗಿ ತಮ್ಮ ವಿಭೂತಿಯನ್ನು ಪ್ರಕಟಪಡಿಸಿದ್ದರೂ ಕೂಡ ನಮ್ಮೊಡನೆ ಮಧುರ ಸ್ನೇಹವನ್ನೇ ತೋರುತ್ತಿದ್ದರು. ಆಹಾ! ಅದೆಷ್ಟು ಚೆನ್ನ! ಈಗ ಅದೆಲ್ಲವೂ ನೆನಪುಗಳು ಮಾತ್ರ. ನೀವೆಲ್ಲ ಈ ಲೀಲೆಯಲ್ಲಿ ಸಹಾಯಕರು. ಕಾಳೀಕೃಷ್ಣ ನಡೆ, ನಡೆ, ಮುನ್ನಡೆ. ನಾವೆಲ್ಲ ಸೇರಬೇಕಾಗಿರುವುದು ಪ್ರಭುವಿನ ಸನಿಹಕ್ಕೆ. ಠಾಕೂರರು ಕಣ್ಮರೆಯಾದ ಮೇಲೆ ವರಾಹನಗರಕ್ಕೆ ಬಂದ ಮೊದಲ ತ್ಯಾಗೀ ಭಕ್ತ ನೀನೇ ಅಲ್ಲವೆ? ನೋಡ ನೋಡುತ್ತ ಅದೆಷ್ಟು ದಿನಗಳು ಕಳೆದುಹೋದವು! ...ನಮ್ಮ Mother ಅದೇ Mrs. Savier ಅವರು ಅಪೂರ್ವ ತ್ಯಾಗದ ನಿದರ್ಶನ. ಭಕ್ತರಾದ ಅವರ ಪತಿಯೂ ಸಹ ಅವರಂತೆಯೇ ಮತ್ತೆ. ನಮ್ಮ ವ್ಯಾಸದೇವನ ಗಣೇಶ ಗುಡ್‌ವಿನ್ ಹಾಗೂ ನಿವೇದಿತಾ, ಇವರೆಲ್ಲರೂ ತೋರಿದ್ದು ಅದೆಂತಹ ಅಪರಿಮಿತ ತ್ಯಾಗದ ಆದರ್ಶ! ಹೆಚ್ಚೇನು ಹೇಳಲಿ ಕಾಳೀಕೃಷ್ಣ? ನಾನು ಪೂಜೆ ಮಾಡಿದಾಗಲೆಲ್ಲ ಅವರಿಗೂ ಹೂವನ್ನರ್ಪಿಸುವೆ. ನಾನು ಸ್ವಾಮೀಜಿಯ ಈ ಭಕ್ತರೆಲ್ಲರ ದಾಸಾನುದಾಸ, ಗುಲಾಮರ ಗುಲಾಮ.

‘‘....ನನ್ನ ಅನುಭವದಿಂದ ವೇದ್ಯವಾಗಿರುವುದೇನೆಂದರೆ ನಾನು, ನನ್ನದು ಎಂಬ ಭಾವವು ಎಲ್ಲ ದುಃಖ ಮತ್ತು ಅಶಾಂತಿಯ ಆಗರ... ರಾಮಕೃಷ್ಣರ ಹಾಗೂ ಶ್ರೀಮಾತೆಯವರ ಭಕ್ತರು, ಆದರ್ಶ ತ್ಯಾಗಿಗಳೂ, ಆದರ್ಶ ಭಕ್ತರೂ ಆಗಬೇಕಾಗಿದೆ. ನಾವೇನು ಭೋಗಿಸಲು ಜನ್ಮವೆತ್ತಿರುವೆವೆ? ನಾವೇನು ದೇಹಸುಖವನ್ನು ಬಯಸುವೆವೆ? ನಮ್ಮ ಸ್ವಂತದವರು ಎಂದು ಹೇಳಿಕೊಳ್ಳಲು ಯಾರಾದರೂ ಈ ಜಗತ್ತಿನಲ್ಲಿದ್ದಾರೆಯೆ? ನಮ್ಮ ಪ್ರಭುವು ಬಂದದ್ದು ಪೂರ್ಣ ಜ್ಞಾನ, ಪೂರ್ಣ ಭಕ್ತಿ ಮತ್ತು ತ್ಯಾಗದ ಆದರ್ಶವನ್ನು ತೋರಲು. ನಾವು ಈ ಪರಿಯ ಐಶ್ವರ್ಯದ ಅಧಿಕಾರಿಗಳಾಗಬೇಕಾಗಿದೆ. ಇಡೀ ಜಗತ್ತೇ ನಿನ್ನ ಆಶ್ರಮವಾಗಲಿ. ಪ್ರಭುವಿನ ಆಶ್ರಮವು ಕೇವಲ ಐದಾರು ಎಕರೆ ಜಮೀನಿಗೆ ಸೀಮಿತವಾಗಿರಲು ಸಾಧ್ಯವೆ? ಕೇವಲ ಒಂದು ಜಾತಿ ಅಥವಾ ಒಂದು ದೇಶದೊಳಗೆ ಸೀಮಿತವಾಗಿರಲು ಸಾಧ್ಯವೆ? ಖಂಡಿತ ಸಾಧ್ಯವಿಲ್ಲ. ಸಣ್ಣ-ಪುಟ್ಟ ಜಾಗವು ನಮ್ಮ ಠಾಕೂರರ ಕ್ಷೇತ್ರವಾಗಲು ಸಾಧ್ಯವಿಲ್ಲ. ನಮ್ಮ ಪ್ರಭುವು ಮಹಾ ಉದಾರಿ, ಸೀಮಾರಹಿತ. ಸಂಕೀರ್ಣ ಸ್ಥಾನದಲ್ಲಿ , ಒಂದು ಎಲ್ಲೆಯೊಳಗೆ ಅವರು ಹೇಗೆ ತಾನೇ ಇರಬಲ್ಲರು? ನಮ್ಮದು ‘ವಸುಧೈವ ಕುಟುಂಬಕಮ್’ ಆಗಬೇಕಾಗಿದೆ. ಸ್ವಾಮೀಜಿಯವರ ಲೀಲೆಯನ್ನು ನೋಡುತ್ತಿಲ್ಲವೇನು? ‘ನಾಲ್ಪೇ ಸುಖಮಸ್ತಿ’ ಹೃದಯವನ್ನು ವಿಶಾಲತೆಯಿಂದ ಅತಿ ವಿಶಾಲತೆಗೆ ಹಿಗ್ಗಿಸಬೇಕಾಗಿದೆ. ಆಗ ಅಲ್ಲಿ ನಮ್ಮ ಪ್ರಭುವಿನ ಆವಿರ್ಭಾವವಾಗುವುದು....

‘‘ಏಕಾಂತದಲ್ಲಿ ಕುಳಿತು ಠಾಕೂರರನ್ನು, ಸ್ವಾಮೀಜಿಯವರನ್ನು ಮನಸಾರೆ ಕರೆ. ತನ್ನನ್ನಾಶ್ರಯಿಸಿದ ಮಗುವನ್ನು ಅವರೇ ಸರಿ ಮಾರ್ಗದಲ್ಲಿ ಕರೆದೊಯ್ಯುವರು. ನಮ್ಮ ಪ್ರಭುವು ಅನಂತ ಕೃಪೆಯ ಆಗರ....’’

ಸ್ವಾಮೀಜಿಯವರ ಜೀವನ ಚರಿತ್ರೆಯ ನಾಲ್ಕನೇ ಭಾಗವು ಪ್ರಕಟವಾಯಿತು. ಈ ಕೆಲಸ ಪ್ರಾರಂಭವಾದಾಗ ಶ್ರೀಮಾತೆಯವರು ವಿರಜಾನಂದರನ್ನು ತುಂಬು ಹೃದಯದಿಂದ ಆಶೀರ್ವದಿಸಿದ್ದರು. ಅವರು ೨೯.೮.೧೯೧೨ರಲ್ಲಿ ಬರೆದ ಪತ್ರದಲ್ಲಿ ‘‘ಸ್ವಾಮೀಜಿಯ ಜೀವನ ಚರಿತ್ರೆಯು ಪ್ರಕಟವಾಗುತ್ತಿದೆ ಎಂಬುದನ್ನು ಕೇಳಿ ಸಂತೋಷವಾಯಿತು. ಆ ಕೆಲಸವು ನಿರ್ವಿಘ್ನವಾಗಿ ನೆರವೇರಲೆಂದು ಆಶೀರ್ವದಿಸುವೆ’’ ಎಂದು ಬರೆದಿದ್ದರು. ಪೂಜ್ಯರಾದ ರಾಜಾ ಮಹಾರಾಜ್, ಶರತ್ ಮಹಾರಾಜ್, ಹರಿ ಮಹಾರಾಜ್, ಗಂಗಾಧರ್ ಮಹಾರಾಜರೂ ಸಹ ಈ ಬೃಹತ್ ಕಾರ್ಯಕ್ಕೆ ತುಂಬ ಪ್ರೋತ್ಸಾಹ ನೀಡಿದ್ದರು. ಅವರೆಲ್ಲರ ಆಶೀರ್ವಾದ ಹಾಗೂ ಸದಿಚ್ಛೆಯು ಇಂದಿಗೆ ಸಾರ್ಥಕವಾಗಿತ್ತು. ವಿರಜಾನಂದರು ಈಗ ನಿರಾಳವಾಗಿ ಉಸಿರುಬಿಟ್ಟರು. ಮದರ್ ಸೇವಿಯರ್, ‘‘ಪುಸ್ತಕದ ಕೆಲಸವು ಮುಗಿದ ತಕ್ಷಣವೇ ಕೆಲವು ದಿನ ಬೇರೆಡೆ ಎಲ್ಲಾದರೂ ಹೋಗಿ, ಸ್ವಲ್ಪ ಸುತ್ತಾಡಿ ಬರುವುದು ಒಳ್ಳೆಯದು’’ ಎಂದು ಮತ್ತೆ ಮತ್ತೆ ಪತ್ರ ಬರೆಯುತ್ತಿದ್ದರು; ‘ಸತತ ಪರಿಶ್ರಮದ ನಂತರ ಸ್ವಲ್ಪ ಹೊರಗೆ ತಿರುಗಾಡಿ ಬಂದರೆ ಶರೀರ-ಮನಸ್ಸಿನ ಆಯಾಸ ದೂರವಾಗುತ್ತದೆ’ ಎಂದು. ಅದಕ್ಕೆ ಬೇಕಾದ ಧನಸಹಾಯವನ್ನು ತಾನು ಮಾಡುವುದಾಗಿಯೂ ಸಹ ತಿಳಿಸಿದ್ದರು. ವಿರಜಾನಂದರಿಗೆ ಈ ಪ್ರಸ್ತಾಪ ಹಿಡಿಸಿತು. ಅವರು ದಕ್ಷಿಣ ಭಾರತದ ತೀರ್ಥಕ್ಷೇತ್ರಗಳನ್ನು ನೋಡಿರಲಿಲ್ಲ. ಆದ್ದರಿಂದ ದಕ್ಷಿಣ ಭಾರತಕ್ಕೆ ಹೋಗಿ ಬರಲು ನಿಶ್ಚಯಿಸಿದರು. ಅವರ ಅನುಪಸ್ಥಿತಿಯಲ್ಲಿ ಶ್ಯಾಮಲಾತಾಲ್ ನೋಡಿಕೊಳ್ಳಲು ನರೇನ್ ಇದ್ದುದರಿಂದ ಚಿಂತೆಯಿರಲಿಲ್ಲ.

೧೯೧೮ರ ಅಕ್ಟೋಬರ್ ೨೭ರಂದು ವಿರಜಾನಂದರು ಶ್ಯಾಮಲಾತಾಲ್‌ನಿಂದ ಹೊರಟು ಹೆತ್ತ ತಾಯಿಯನ್ನು ನೋಡಲು ಮೊದಲು ಬೃಂದಾವನಕ್ಕೆ ಹೋದರು. ಅಲ್ಲಿದ್ದ ಮೂರು ದಿನವೂ ತಾಯಿ ವಿಧವಿಧದ ಅಡಿಗೆ ಮಾಡಿ ಅವರಿಗೆ ಬಡಿಸುತ್ತಿದ್ದರು. ಆಕೆಯ ಸ್ನೇಹಿತೆಯರು ಸಹ ವಿರಜಾನಂದರನ್ನು ನೋಡಲು ಬರುತ್ತಿದ್ದರು, ಹಾಗೂ ಅನೇಕ ಸಿಹಿ ತಿಂಡಿಗಳನ್ನು ತರುತ್ತಿದ್ದರು. ಬೃಂದಾವನದಲ್ಲಾಗ ಮಿಷನ್ನಿನ ಸೇವಾಶ್ರಮವು ಸ್ಥಾಪಿತವಾಗಿತ್ತು. ನಾದು ಅದರ ಅಧ್ಯಕ್ಷ (ನಾದು ಸ್ವಾಮೀಜಿಯವರ ತಂಗಿಯ ಮಗ, ಇವರೇ ೧೮೯೮ರಲ್ಲಿ ಕಾಳೀಕೃಷ್ಣರೊಂದಿಗೆ ಮಾಯಾವತಿಗೆ ಹೋಗಿದ್ದವರು). ವಿರಜಾನಂದರು ಸೇವಾಶ್ರಮಕ್ಕೆ ಹೋಗಿ ಎಲ್ಲರನ್ನೂ ಭೇಟಿಯಾಗಿ ಬಂದರು. ನಂತರ ಬೃಂದಾವನದಿಂದ ಅಲಹಾಬಾದಿಗೆ ಹೋಗಿ, ಅಲ್ಲಿ ಮುಂಡನ ಮಾಡಿಸಿಕೊಂಡು ತ್ರಿವೇಣೀ ಸಂಗಮದಲ್ಲಿ ಸ್ನಾನ ಮಾಡಿದರು. ಕಾಶಿಗೂ ಹೋಗಿ ಬಂದರು. ಅಲ್ಲಿ ಸ್ವಾಮಿ ವಿಜ್ಞಾನಾನಂದಜೀ, ಬೂಡೋ ಬಾಬಾ (ಸಚ್ಚಿದಾನಂದಜೀ), ಖೋಕಾ ಮಹಾರಾಜ್ ಹಾಗೂ ಗುರುಭ್ರಾತರಾದ ಕೃಷ್ಣಲಾಲ್ (ಸ್ವಾಮಿ ಧೀರಾನಂದ) ಇವರನ್ನೆಲ್ಲ ಭೇಟಿಯಾಗಿ ಬಂದರು. ಪೂಜ್ಯರಾದ ಲಾಟು ಮಹಾರಾಜರ ದರ್ಶನವನ್ನೂ ಪಡೆದರು.

*(ಮುಂದುವರಿಯುವುದು)*